ಶ್ರೀ ವಾಟಾಳ್ ನಾಗರಾಜ್ : ದರೋಡೆಕೋರರು ಬಂಧೂಕು ಹಿಡಿದು ಬಸ್ಸನ್ನು ನಿಲ್ಲಿಸಿ, ಬಸ್ಸಿನ ಒಳಗಡೆ ಬಂಧೂಕು ಹಿಡಿದುಕೊಂಡು ಹೋಗಿದ್ದಾರೆ. ಸಂಚಾರಿ ಪೋಲೀಸ್ ವಾಹನಗಳನ್ನೇನಾದರೂ ರಸ್ತೆ ರಸ್ತೆಗಳಲ್ಲಿ ಏರ್ಪಾಡು ಮಾಡುತ್ತೀರಾ. ಇದರ ಬಗ್ಗೆ ಜಾಗೃತಿ ಇರಬೇಕು. ಇಡೀ ರಾಜ್ಯದಲ್ಲಿ ಗಂಭೀರ ಪರಿಸ್ಥಿತಿ ಇದೆ.....

ಅಧ್ಯಕ್ಷರು :ಅದಕ್ಕೆ ಏನು ಮಾಡಬೇಕು ಹೇಳಿ. ಸೋಮವಾರ ಗಮನ ಸೆಳೆಯುವ ಸೂಚನೆಯಾಗಿ ಇದನ್ನು ತೆಗೆದುಕೊಳ್ಳೋಣವೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಧರ್ಮಸಿಂಗ್ : ನಿನ್ನೆ ಬೀದರ್‌ನಲ್ಲಿ ಆಗಿದೆ, ಅದಕ್ಕಾಗಿ ಅಲ್ಲಿಗೆ ಒಂದು ಸ್ಕಾಡ್ ಮಾಡಿ, ಒಂದು ಜೀಪು, ಎರಡು ಇನ್ ಸ್ಪೆಕ್ಟರ್ ಗಳನ್ನು ಕಳುಹಿಸಿದ್ದೇವೆ. ಇಲ್ಲಿಯೂ ಕೂಡ ಮಾಡುತ್ತೇವೆ. ಸೋಮವಾರದ ದಿವಸ ಇದಕ್ಕೆ ಉತ್ತರ ಕೊಡುತ್ತೇನೆ.

2) ಯುಗಾದಿ ಹಬ್ಬಕ್ಕಾಗಿ ಹೆಚ್ಚುವರಿ ಗೋಧಿ ಕೊಡುವುದರ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ನಿನ್ನೆಯ ದಿವಸ ಮಾನ್ಯ ಆಹಾರ ಮಂತ್ರಿಗಳು ಒಂದು ಹೇಳಿಕೆ ನೀಡಿ, ಒಂದು ಆಶ್ವಾಸನೆ ಕೊಟ್ಟರು. ಯುಗಾದಿ ಹಬ್ಬಕ್ಕೋಸ್ಕರ 3 ಕೆ.ಜಿ ಗೋಧಿಯನ್ನು ಹೆಚ್ಚು ಕೊಡುತ್ತೇವೆ ಎಂಬ ಭರವಸೆಯನ್ನು ಕೊಟ್ಟರು. ಅದೂ ಮುಗ್ಗಲು ಗೋಧಿ ಎಂದು ಹೇಳುವುದರ ಜೊತೆಗೆ, ಯುಗಾದಿ ಹಬ್ಬಕ್ಕೆ ಇರಲಿ, ಈ ವರ್ಷದ ಮಾರ್ಚ್ ತಿಂಗಳ ಆಹಾರ ಸಾಮಾಗ್ರಿಗಳು ಇನ್ನೂ ಬಿಡುಗಡೆಯಾಗಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕು. ಯುಗಾದಿ ಹಬ್ಬಕ್ಕೋಸ್ಕರ ಪ್ರತಿ ವರ್ಷ 3 ಕೆ.ಜಿ. ಹೆಚ್ಚುವರಿಯಾಗಿ ಸಕ್ಕರೆ, ಗೋಧಿ, ಪಾಮೋಲಿನ್ ಎಣ್ಣೆ ಕೊಟ್ಟುಕೊಂಡು ಬಂದಿರುವುದು ಸಂಪ್ರದಾಯ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾರ್ಚ್ ತಿಂಗಳಲ್ಲಿ ಕಾರ್ಡುದಾರರಿಗೆ ಕೊಡಬೇಕಾಗಿರತಕ್ಕ ಪಾಮೋಲಿನ್ ಎಣ್ಣೆ ಮತ್ತು ಸಕ್ಕರೆಯನ್ನು ಇದುವರೆಗೂ ಬಿಡುಗಡೆ ಮಾಡಿಲ್ಲ. ಸ್ವತಃ ನಮ್ಮ ಕುಟುಂಬದವರೇ ನಿನ್ನೆಯ ದಿವಸ ಅಂಗಡಿಗೆ ಹೋಗಿ ಎರಡು ಗಂಟೆಗಳ ಕಾಲ ನಿಂತು ವಾಪಸ್ ಬಂದಿದ್ದಾರೆ. ಸಕ್ಕರೆ ಬಂದಿಲ್ಲ, ಎಣ್ಣೆ ಬಂದಿಲ್ಲ. ಆದ್ದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಅಂಗಡಿಯವರು ಹೇಳಿದ್ದಾರೆ. ಇದರ ಬಗ್ಗೆ ದಯಮಾಡಿ, ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಕೊಡಬೇಕು. ನಿನ್ನೆಯ ದಿನ ಆಹಾರ ಮಂತ್ರಿಗಳು 3 ಕೆ.ಜಿ. ಗೋಧಿ ಹೆಚ್ಚು ಕೊಡುತ್ತೇವೆಂದು ಹೇಳಿದರು. ಫುಡ್ ಕಾರ್ಪೋರೇಷನ್ ಗೋಡೌನ್ ನಲ್ಲಿ ಮುಗ್ಗಲು ಗೋಧಿ ಇದೆ. ಈ ಗೋಧಿ ಯಾರಿಗೆ ಬೇಕಾಗಿದೆ. ಜನರಿಗೆ ಬೇಕಾಗಿರುವುದು ಸಕ್ಕರೆ ಮತ್ತು ಪಾಮೋಲಿನ್ ಎಣ್ಣೆ. ಯುಗಾದಿ ಹಬ್ಬಕ್ಕೋಸ್ಕರ ಶುಭಾಶಯಗಳನ್ನು ಕೋರುವವರು ಕೊನೆಯ ಪಕ್ಷ, ಯುಗಾದಿ ಹಬ್ಬಕ್ಕೆ ಸಕ್ಕರೆ, ಪಾಮೋಲಿನ್ ಎಣ್ಣೆಯನ್ನು ಕೊಡಬೇಡವೇ? ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಕೊಡಬೇಕಾಗಿರುವ ಗೋಧಿ ಮತ್ತು ಎಣ್ಣೆಯನ್ನು ಬೆಂಗಳೂರು ನಗರದವರಿಗೆ, ಹುಬ್ಬಳ್ಳಿ, ಬೆಳಗಾಂನಂಥ ಪಟ್ಟಣ ಪ್ರದೇಶದಲ್ಲಿರತಕ್ಕ ಜನರಿಗೆ ತಕ್ಷಣ ಬಿಡುಗಡೆ ಮಾಡುವುದಕ್ಕೆ ತಾವು ಆದೇಶ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇದು ಕೇವಲ ಬೆಂಗಳೂರು ಒಂದಕ್ಕೇ ಅಲ್ಲ, ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಪ್ರತಿ ವರ್ಷ ಯುಗಾದಿಗೆ ಮುಂಚಿತವಾಗಿ ವಿಶೇಷವಾಗಿ ಸಕ್ಕರೆ ಕೊಡುತ್ತಿದ್ದರು. ನಿನ್ನೆ ಆಹಾರ ಮಂತ್ರಿಗಳು ಒಂದು ಹೇಳಿಕೆ ಕೊಟ್ಟು ಬರೀ ಗೋಧಿ ಮಾತ್ರ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಗೋಧಿನೂ ತಲುಪಿಲ್ಲ, ಸಕ್ಕರೇನೂ ತಲುಪಿಲ್ಲ. ಪರಿಸ್ಥಿತಿ ನಿಜವಾಗಲೂ ಬಹಳ ಕಹಿಯಾಗಿದೆ. ಬೇವು ಬೆಲ್ಲ ತಿನ್ನಬೇಕೆಂಬ ಸಂಪ್ರದಾಯ ಇದೆ. ಬರೀ ಬೇವನ್ನು ಕೊಡಬೇಡಿ, ಸಕ್ಕರೆ ಕೊಡತಕ್ಕಂಥ ಸಂಪ್ರದಾಯವನ್ನು ಮಾಡಿರಿ, ತಕ್ಷಣ

ಇಡೀ ರಾಜ್ಯದ ಮೂಲೆ ಮೂಲೆಗಳಿಗೆ ಎಲ್ಲಾ ಪ್ರದೇಶಕ್ಕೆ ಸಕ್ಕರೆಯನ್ನು ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

3) ಸಾಲ ವಸೂಲಿಗಾಗಿ ರೈತರ ಜಮೀನು ಹರಾಜು ಮಾಡುತ್ತಿರುವುದು

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ): ಅಧ್ಯಕ್ಷರೇ, ರೈತರ ಸಾಲದ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ಮಾರ್ಚ್ 31ನೇ ತಾರೀಖಿನವರೆಗೆ ಸಾಲ ವಸೂಲಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಬಂಗಾರುಪೇಟೆ ತಾಲ್ಲೂಕಿನಲ್ಲಿ ಉದ್ದೇಶಪೂರ್ವಕವಾಗಿ 4.3.91 ರಂದು 7 ಜನ ರೈತರ ಜಮೀನನ್ನು ಹರಾಜು ಮಾಡಿ, ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಸ್ಥಿರೀಕರಿಸಿ ಆ ದುಡ್ಡನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ. ಏಕೆಂದರೆ ಈ ಬಗ್ಗೆ ಸರಕಾರ ಸ್ಪಷ್ಟವಾಗಿ ನಿರ್ದಿಷ್ಟವಾಗಿ ತಿಳಿಸಿದ್ದರೂ ಸಹ ಆ ಅಧಿಕಾರಿಗಳು ತಮ್ಮ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ. ಸರಕಾರಕ್ಕೆ ಕೆಟ್ಟ ಹೆಸರನ್ನು ತರತಕ್ಕಂಥ ವ್ಯವಸ್ಥೆ ಮಾಡಿರುತ್ತಾರೆ. ಇಡೀ ತಾಲ್ಲೂಕಿನಲ್ಲಿ ಕೇವಲ 7 ಜನ ರೈತರ ಜಮೀನು ಹರಾಜು ಮಾಡಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಹರಾಜು ಮಾಡಿರತಕ್ಕ ಜಮೀನನ್ನು ಏನು ಮಾಡುತ್ತೀರಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

4) ಪಂಪುಸೆಟ್‌ಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು.

ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಮ್ಮ ಮೂಲಕ ಒಂದು ಮನವಿಯನ್ನು ಸಲ್ಲಿಸಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ 60ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ವಿದ್ಯುತ್ ಮಂಡಳಿಯವರು ಒಂದು ಕಂಬಕ್ಕೆ ಐದು ನೂರು ರೂಪಾಯಿ ಲಂಚ ಕೇಳುತ್ತಿದ್ದಾರೆ. 6 ಕಂಬ ಇದ್ದರೆ, ಮೂರು ಸಾವಿರ, ಮೂರು ಕಂಬ ಇದ್ದರೆ ಒಂದೂವರೆ ಸಾವಿರ ಲಂಚ ಕೇಳುವ ಮೂಲಕ ರೈತರನ್ನು ಶೋಷಣೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಮುಖ್ಯಮಂತ್ರಿಯವರು ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡಿದ್ದೇನೆ. ತಾವು ಈ ಬಗ್ಗೆ ಆದೇಶ ನೀಡಬೇಕು.

5) ಪಾಮೋಲಿನ್ ಎಣ್ಣೆಯನ್ನು ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜು ಮಾಡುವುದು.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ) : ಮಾನ್ಯ ಅಧ್ಯಕ್ಷರೇ, ಪಾಮೋಲಿನ ಎಣ್ಣೆ ಕೇವಲ ನಗರ ಪ್ರದೇಶಕ್ಕೆ ಮಾತ್ರ ಸರಬರಾಜಾಗುತ್ತಿದೆ. 5.6 ತಿಂಗಳಿಂದ ಗ್ರಾಮಾಂತರ ಪ್ರದೇಶಕ್ಕೆ ಸರಬರಾಜಾಗುತ್ತಿಲ್ಲ. ಗ್ರಾಮಾಂತರ ಪ್ರದೇಶದ ಜನಗಳಿಗೆ ಪಾಮೋಲಿನ್ ಎಣ್ಣೆ ಬರುತ್ತದೆ ಎಂಬುದು ಗೊತ್ತಾಗುತ್ತಿಲ್ಲ. ಎಲ್ಲಾ ಪಾಮೋಲಿನ್ ಎಣ್ಣೆ ನಗರ ಪ್ರದೇಶಕ್ಕೇ ಸರಬರಾಜಾಗುತ್ತಿದ್ದು, ಗ್ರಾಮಾಂತರ ಪ್ರದೇಶಕ್ಕೆ ಸರಬರಾಜಾಗುತ್ತಿಲ್ಲ. ಕೂಡಲೇ ಗ್ರಾಮಾಂತರ ಪ್ರದೇಶಕ್ಕೂ ಇದನ್ನು ಸರಬರಾಜು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಪಾಮೋಲಿನ್ ಸಕ್ಕರೆ, ಎಣ್ಣೆ ಸಾಲ ವಸೂಲಿ ಎಲ್ಲಾ ಒಂದಕ್ಕೊಂದಕ್ಕೆ ಮಿಸ್ಸ್ ಆಗಿ ಕನ್‌ಫ್ಯೂಸ್ ಆಗುವುದು ಬೇಡ. ಸಕ್ಕರೆ, ಪಾಮೋಲಿನ್ ಎಣ್ಣೇದು ಒಂದು ಕಡೆ ಹೇಳಿ, ಸಾಲ ವಸೂಲಾದ ಮೇಲೆ ಹೇಳಿ. ಸಕ್ಕರೆ, ಸಾಲ ವಸೂಲಿ ಎಲ್ಲಾ ಒಂದೇ ಕಡೆ ಸೇರಿಸಿಬಿಟ್ಟು ತೊಂದರೆಯಾಗುವುದು ಬೇಡ.